# ನವೋದಯ ಮಹಿಳಾ ಕಥೆಗಳಲ್ಲಿ ಸ್ತ್ರೀನಿಷ್ಟತೆ

**ವಾಣಿ ಬಿ. ಎನ್.**

ಸಂಶೋಧನಾರ್ಥಿ, ಜ್ಞಾನಭಾರತಿ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

**Received: 15/10/2024 ; Acepted: 01/11/2024 ; Published: 30/11/2024**

**DOI: https://doi.org/10.5281/zenodo.14246534**

## ABSTRACT:

ನವೋದಯ ಕಾಲಘಟ್ಟದ ಪ್ರಮುಖ ಲೇಖಕಿಯರಾದ ಕೊಡಗಿನ ಗೌರಮ್ಮ, ಕಲ್ಯಾಣಮ್ಮ, ಸರಸ್ವತಿ ಬಾಯಿ ರಾಜವಾಡೆ(ಗಿರಿಬಾಲೆ), ಶ್ಯಾಮಲಾ ಬೆಳಗಾವಂಕರ ಮೊದಲಾದ ಲೇಖಕಿಯರ ಕತೆಗಳಲ್ಲಿ ವ್ಯಕ್ತವಾಗಿರುವ ಸ್ತ್ರೀಪರ ನಿಲುವುಗಳನ್ನು ಕುರಿತಿದೆ. ಗೌರಮ್ಮ ಅವರ ಪುರ್ನವಿವಾಹ ಕತೆಯ ನಾಯಕಿ ರಾಜಿಯ ಮನಸ್ಸಿನಲ್ಲಿರು ಪುರುಷ ನಡವಳಿಕೆಯ ಬಗೆಗಿನ ಅಸಹನೆ, 'ವಾಣಿಯ ಸಮಸ್ಯೆ' ಕತೆಯಲ್ಲಿ ಇಂದುವಿಯ ನೈತಿಕ ಚೌಕಟ್ಟು, ಹೋಗಿಯೇ ಬಿಟ್ಟಿದ್ದ ಕತೆಯಲ್ಲಿನ ಅಂರ್ತಧರ್ಮಿಯ ಪ್ರೇಮದ ಕರಾಳತೆ, ಗಿರಿಬಾಲೆ ಅವರ 'ಅವಳ ಉದ್ದಾರ' ಕತೆಯಲ್ಲಿ ಹೆಣ್ಣಿನ ಕೌಟುಂಬಿಕ ಹಾಗೂ ಸಾಮಾಜಿಕ ಶೋಷಣೆ ಪರಿ, ಕಲ್ಯಾಣಮ್ಮ ಅವರ 'ನನ್ನ ಧನವ ನನಗೆ ತಾ' ಕತೆಯಲ್ಲಿನ ಮಾತೃ ವಾತ್ಸಲ್ಯ, 'ಒಲ್ಲದ ಹೆಂಡತಿ' ಕತೆಯಲ್ಲಿ ಮಕ್ಕಳನ್ನು ಬೆಳೆಸುವಲ್ಲಿ ತಾಯಿಯ ಹೊಣೆ ಎಷ್ಟು ಮುಖ್ಯವಾದದ್ದು, ಶ್ಯಾಮಲಾ ಅವರ 'ಕಂತಿಯ ದೇಶಾಂತರ' ಕತೆಯಲ್ಲಿ ಹೆಣ್ಣಿನ ದೈರ್ಯ ಹೀಗೆ ಇವರ ಕಥಾ ಸಾಹಿತ್ಯವು ಮಹಿಳೆಯರ ಅಭಿವ್ಯಕ್ತಿಯ ನೆಲೆಗಳಾಗಿವೆ. ಸಾಮಾಜಿಕ ಸಮಸ್ಯೆಗಳ ಕುರಿತ ಚಿಂತನೆ, ಮಹಿಳಾ ಸಂವೇದನೆಯನ್ನು ಪ್ರಸ್ತುತ ಪಡಿಸುವಲ್ಲಿ ಇವರ ಕಥೆಗಳು ಮಹತ್ವದ್ದಾಗಿವೆ. ಇವರು ಅಸ್ಪೃಷ್ಯತೆ, ವಿಧವಾ ಸಮಸ್ಯೆ, ವರದಕ್ಷಿಣೆ ಕಿರುಕುಳ, ವೇಶ್ಯಾಸಮಸ್ಯೆ ಮೊದಲಾದ ಸಾಮಾಜಿಕ ಹಾಗೂ ಕೌಟುಂಬಿಕವಾದ ಸವಾಲುಗಳ ಬಗೆಗೆ ದೃತಿಗೆಡದೆ ಬರೆದಿದ್ದಾರೆ. ಪ್ರಸ್ತುತ ಲೇಖನದಲ್ಲಿ ಮೇಲಿನ ಕಥೆಗಳಲ್ಲಿ ಮೂಡಿಬಂದಿರುವ ಸ್ತ್ರೀಪರವಾದ ನಿಲುವುಗಳನ್ನ ವಿಮರ್ಶಾತ್ಮಕವಾಗಿ ಅಭಿವ್ಯಕ್ತಿಸಿದ್ದೇನೆ.

## KEYWORDS:

ನವೋದಯ, ಮಹಿಳಾ ಲೇಖಕಿಯರು, ಕಥಾ ಸಾಹಿತ್ಯ, ಕುಟುಂಬ, ಮಹಿಳಾ ಶೋಷಣೆ, ಮಹಿಳಾ ಅಭಿವ್ಯಕ್ತಿ.

ಕಥಾಪರಂಪರೆ ಕನ್ನಡ ಸಾಹಿತ್ಯದಲ್ಲಿ ಹೊಸದಲ್ಲದಿದ್ದರೂ, ಸಣ್ಣಕಥೆ ಪ್ರಕಾರ ಆಧುನಿಕ ಕನ್ನಡ ಸಾಹಿತ್ಯಕ್ಕೆ ಪಾಶ್ಚಾತ್ಯರ ಪ್ರೇರಣೆ ಮತ್ತು ಪ್ರಭಾವದಿಂದ ರೂಪುಗೊಂಡಿದೆ. ಆಧುನಿಕ ಕನ್ನಡ ಸಾಹಿತ್ಯವನ್ನು ವಸ್ತು, ವೈವಿಧ್ಯತೆ ರೂಪುರೇಷೆಗಳಿಗೆ ಅನುಗುಣವಾಗಿ ನವೋದಯ, ಪ್ರಗತಿಶೀಲ, ನವ್ಯ, ದಲಿತ– ಬಂಡಾಯ ಸಾಹಿತ್ಯ ಎಂದು ಗುರುತಿಸಲಾಗಿದೆ. ಸಾಹಿತ್ಯ ವಸ್ತುವಾಗಿ ಮಹಿಳೆ ಪ್ರಾರಂಭದಿಂದಲೂ ಸ್ಥಾನಪಡೆದಿದ್ದರೂ ಸಾಹಿತ್ಯ ರಚನೆಯಲ್ಲಿ ಪಾಲ್ಗೊಂಡಿದ್ದು ಇತ್ತೀಚೆಗಷ್ಟೆ. ಆರಂಭದ ಸಂದರ್ಭದಲ್ಲಿಯೂ ಕೇವಲ ಬೆರಳೆಣಿಕೆಯಷ್ಟು ಮಹಿಳೆಯರು ಬರವಣಿಗೆಯಲ್ಲಿ ಅಂಕುರವಿಟ್ಟರು. ನವೋದಯ ಸಂದರ್ಭದಲ್ಲಿ ತಿರುಮಲಾಂಬ, ಕಲ್ಯಾಣಮ್ಮ (1892–1965), ಕೊಡಗಿನ ಗೌರಮ್ಮ, ಸರಸ್ವತಿ ರಾಜವಾಡೆ(ಗಿರಿಬಾಲೆ), ಶ್ಯಾಮಲಾ ಬೆಳಗಾಂವಕರ (1911–1943) ಮೊದಲಾದವರು ತಮ್ಮ ಅಭಿವ್ಯಕ್ತಿಯನ್ನು ಸಾಹಿತ್ಯದ ಮೂಲಕ ಸಮಾಜದ ಮುಂದಿಟ್ಟರು. ಇವರ ಕಥಾ ಸಾಹಿತ್ಯವು ಮಹಿಳೆಯರ ಅಭಿವ್ಯಕ್ತಿಯ ನೆಲೆಗಳಾಗಿವೆ, ಸಾಮಾಜಿಕ ಸಮಸ್ಯೆಗಳ ಕುರಿತ ಚಿಂತನೆ, ಮಹಿಳಾ ಸಂವೇದನೆಯನ್ನು ಪ್ರಸ್ತುತ ಪಡಿಸುವಲ್ಲಿ ಮಹಿಳಾ ಕಥೆಗಳು ಮಹತ್ವದ್ದಾಗಿವೆ. ಇವರು ಅಸ್ಪೃಷ್ಯತೆ, ವಿಧವಾ ಸಮಸ್ಯೆ, ವರದಕ್ಷಿಣೆ ಕಿರುಕುಳ, ವೇಶ್ಯಾಸಮಸ್ಯೆ ಮೊದಲಾದ ಸಾಮಾಜಿಕ ಹಾಗೂ ಕೌಟುಂಬಿಕವಾದ ಸವಾಲುಗಳ ಬಗೆಗೆ ದೃತಿಗೆಡದೆ ಬರೆದಿದ್ದಾರೆ. ಪ್ರಸ್ತುತ ಲೇಖನದಲ್ಲಿ ಮೇಲಿನ ಲೇಖಕಿಯರ ಕಥೆಗಳಲ್ಲಿ ಮೂಡಿಬಂದಿರುವ ಸ್ತ್ರೀಪರವಾದ ನಿಲುವುಗಳನ್ನ ಚರ್ಚಿಸಿದ್ದೇನೆ.

ಕೊಡಗಿನ ಗೌರಮ್ಮ ಆರಂಭದ ಪ್ರಮುಖ ಕತೆಗಾರ್ತಿ. ಇವರು ಬರವಣಿಗೆ ಆರಂಭಿಸಿದ ಕಾಲದಲ್ಲಿ ಮಹಿಳೆಯರು ಸಾಮಾಜಿಕ ಕಟ್ಟುಪಾಡುಗಳಿಂದ ಹೊರಬಂದು ಸಾಹಿತ್ಯ ರಚನೆಯಲ್ಲಿ ತೊಡಗಿದ್ದು ಸುಲಭ ಸಾಧ್ಯವಾಗಿರಲಿಲ್ಲ. ಅದರಲ್ಲೂ ಮಹಿಳೆ ಏನು ಬರೆಯಲು ಸಾಧ್ಯ ಎಂಬ ತಾತ್ಸಾರದ ನಡುವೆಯೂ ಹೆಣ್ಣಾಗಿ ಹೆಣ್ಣಿನ ಬದುಕನ್ನು ಹತ್ತಿರದಿಂದ ನೋಡಿದ ಇವರು ತಮ್ಮ ಕಥೆಗಳಲ್ಲಿ ವಸ್ತುವಾಗಿಯೇ ಅವುಗಳನ್ನು ಬಳಸಿಕೊಂಡಿದ್ದಾರೆ. ಇವರ ಪುರ್ನವಿವಾಹ, ಹೋಗಿಯೇ ಬಿಟ್ಟಿದ್ದ, ವಾಣಿಯ ಸಮಸ್ಯೆ ಕಥೆಗಳಲ್ಲಿ ಪ್ರಮುಖವಾಗಿ ವಿಧವೆಯ ಸಮಸ್ಯೆ, ಹೆಣ್ಣಿನ ನೈತಿಕ ಪ್ರಜ್ಞೆ, ಅಂತರ್ಧರ್ಮೀಯ ಪ್ರೇಮದಿಂದಾಗು ದುರಂತಗಳನ್ನು ಕಟ್ಟಿಕೊಟ್ಟಿದ್ದಾರೆ. 'ಪುರ್ನವಿವಾಹ'ದ ನಾಯಕಿ ರಾಜಿ ಪುರುಷ ಪ್ರಧಾನತೆಯನ್ನು ವಿರೋಧಿಸುವ ನಿಲುವುಳ್ಳವಳಾಗಿದ್ದಾಳೆ. ತನ್ನ ಮುದ್ದಿನ ಮಡದಿಯನ್ನು ಕಳೆದುಕೊಂಡ 35 ವರ್ಷದ ವಿಧುರ ಆಕೆ ಸತ್ತು ಮೂರೆ ತಿಂಗಳಲ್ಲಿ ಮತ್ತೊಂದು ಮದುವೆಯಾಗಲು ನಿರ್ಧರಿಸುತ್ತಾನೆ. ರಾಜಿಯ ಲಾವಣ್ಯತೆಗೆ ಮನಸೋತ ಆತ ಆಕೆಯನ್ನು ನೋಡಲು ಕಾತರತೆಯಿಂದ ಹವಣಿಸುತ್ತಿರುತ್ತಾನೆ. ಮದುವೆಯನ್ನು ಆತನೆ ನಿಶ್ಚಯಿಸಿದ್ದ ಆದರೆ ರಾಜಿ ಬಾಲ ವಿಧವೆ ಎಂದು ತಿಳಿದೊಡನೆಯೇ 35 ವರ್ಷದ ಸಿರಿವಂತನ ಪ್ರೀತಿಯಲ್ಲಾ

ತಿರಸ್ಕಾರವಾಗುತ್ತದೆ “ನೀನು ವಿಧವೆ ಎಂದು ತಿಳಿದಿದ್ದರೆ ನಿನ್ನ ಮುಖವನ್ನು ಸಹ ನೋಡುತ್ತಿರಲ್ಲಿಲ್ಲ. ಯಾವ ವಿಧವೆಯನ್ನು ಪ್ರಾತಃಕಾಲದಲ್ಲಿ ನೋಡಿದರೆ ಅಮಂಗಲವೋ ಅಂತಹ ವಿಧವೆಯನ್ನು ಮದುವೆಯಾಗುವವ ನಾನಲ್ಲ”[1] ಎಂಬ ಆತನ ಮಾತುಗಳಲ್ಲಿ ಸಂಪ್ರದಾಯತೆಯ ಮೌಢ್ಯತೆ ಎದ್ದು ಕಾಣುತ್ತದೆ. ವಿದವೆಯನ್ನು ನೋಡಿದರೆ ಆಗುವ ಅಮಂಗಲ ವಿದುರನ್ನು ನೋಡಿದರೆ ಆಗುವುದಿಲ್ಲವೆ ಎಂಬ ಚಿಂತನೆ ರಾಜಿಯಲ್ಲಿರುತ್ತದೆ. ಆದರೆ ಬಡತನದಲ್ಲಿದ್ದ ರಾಜಿ ವಿದುರನ ಸಿರಿವಂತಿಕೆಗೆ ಆಸೆ ಪಡದೆ ತನ್ನ ಮದುವೆ ಆತನೊಡನೆ ನಿಶ್ಚಯವಾದಾಗ ಆಕೆಯೆ ಆತನನ್ನು ಬೇಟಿಯಾಗಿ ತನ್ನ ಮನಸ್ಸಿನಲ್ಲಿರುವ ಪ್ರೇಮ ಮೋಹ ಕುರಿತಾದ ಅಭಿಪ್ರಾಯಗಳನ್ನು ಚರ್ಚಿಸಿ ತಾನು ಬಾಲವಿದವೆ ಎಂದು ದಿಟ್ಟತನದಿಂದಲೆ ಹೇಳುತ್ತಾಳೆ. ಅವನ ತಿರಸ್ಕಾರದ ಮಾತುಗಳನ್ನು ಹದಿನೈದು ವರ್ಷದ ರಾಜಿ ಬಹಳ ಪ್ರಭುದ್ದತೆಯಿಂದಲೆ ವಿರೋದಿಸಿ ಪುರುಷ ಸಮಾಜ ಹೆಣ್ಣಿನ ಮೇಲೆ ವಿಧಿಸುತ್ತಿರುವ ಕಟ್ಟುಪಾಡುಗಳನ್ನೆಲ್ಲಾ ಪ್ರಶ್ನಿಸುವ ದೃಡತೆಯನ್ನು ತೋರುತ್ತಾಳೆ.

ಇವರ ‘ವಾಣಿಯ ಸಮಸ್ಯೆ’ ಗೌರಮ್ಮರ ಪ್ರಮುಖ ಕತೆ ನಾಯಕಿ ಇಂದು ವಿಧವೆಯಾದರೂ ಅಸಹಾಯಕ ಜೀವನ ನಡೆಸುತ್ತಿರಲಿಲ್ಲ. ಅವಳು ಒಂಟಿಯಾಗಿದ್ದು ಸ್ವತಂತ್ರ್ಯವಾಗಿ ಬದುಕುವ ಜೀವನವನ್ನೆ ಆಯ್ದುಕೊಳ್ಳುತ್ತಾಳೆ. ಬಹಳ ಗಂಭೀರತೆ ಹೊಂದಿದ್ದ ಇಂದು ಮನಸ್ಸಿನಲ್ಲಿ ಚಂಚಲತೆಯನ್ನು ಸುಳಿಯಗೊಡದೆ ಸ್ವಬಾವತಃ ಕಟ್ಟು- ಕಟ್ಟಲೆಗಳನ್ನೆ ದೇವರ ನಿಯಮಗಳೆಂದು ತಿಳಿದು ಬೆಳೆದವಳಾಗಿದ್ದಳು. ಹೀಗಾಗಿ ಆಕೆ ಹೆಚ್ಚು ಮಾನವೀಯ ಸಂಬಂಧಗಳಿಂದ ದೂರ ಉಳಿಯುವಳು. ಆದರೆ ನೆರೆಮನೆಗೆ ಬಂದ ವಾಣಿ ಮತ್ತು ಅವಳ ಗಂಡ ರತ್ನರಿಂದ ಇಂದುವಿನ ಜೀವನ ಒಂದು ಬಗೆಯ ಸಮಸ್ಯಾತ್ಮಕತೆಗೆ ತಿರುಗುತ್ತದೆ. ವಾಣಿಯೊಂದಿಗೆ ಸ್ನೇಹಪರತೆಯಲ್ಲಿ ಬರೆತ ಇಂದುವಿನ ಕುಶಲತೆ, ಅಚ್ಚುಕಟ್ಟುತನದಿಂದಾಗಿ ರತ್ನ ಇಂದುವಿನೆಡೆಗೆ ಆಕರ್ಷಿತನಾಗುತ್ತಾನೆ. ವಾಣಿಯ ಸರಸ ದಾಂಪತ್ಯವನ್ನು ಕಂಡು ಇಂದುವಿನ ಮನಸ್ಸು ಕೂಡ ವಿಚಲಿತವಾಗುತ್ತದೆ . ಏಕಾಂತ ಬದುಕಿನಲ್ಲಿ ಕೊಲಾಹಲವೆಬ್ಬಿಸುವ ಸೂಚನೆ ದೊರೆತೊಡನೆ ತನ್ನೊಲವು ರತ್ನನ ಕಡೆಗೆ ತಿರುಗಿದೆ ಎಂಬುದರ ಅರಿವಾದಾಗ ಭಯಪಡುವಳು. ಹೆಂಡತಿ ವಾಣಿ ಇಲ್ಲದಿದ್ದಾಗ ಇಂದುವಿನೊಡನೆ ಆತ್ಮೀಯನಾಗಲು ಪ್ರಯತ್ನಿಸಿದರೂ ಯಾರಿಗೂ ತಿಳಿಸದೆ ಇಂದೂ ಅಲ್ಲಿಂದ ಫಲಾಯಾನ ಮಾಡುತ್ತಾಳೆ.

“ಪರಪುರುಷನ ಕಡೆಗಿನ ಸುಪ್ತವಾದ ಸೆಳೆತ ಹಾಗೂ ಅದನ್ನು ಹತ್ತಿಕ್ಕವ ನೈತಿಕ ಪ್ರಜ್ಞೆ ಮತ್ತು ಸಮಾಜದ ಕಟ್ಟುಕಟ್ಟಳೆಗಳನ್ನು ಮೀರಿ ನಿಲ್ಲುವ ದೈಹಿಕ ಬಯಕೆ ಇವುಗಳ ಸಂಘರ್ಷದಲ್ಲಿ ವಿಧವೆ ಇಂದು ನಲುಗಿ ಹೋಗುತ್ತಾಳೆ. ಬೇರೊಬ್ಬಳ ಗಂಡನಜೊತೆ ಅನೈತಿಕ ಸಂಬಂದ ಬೆಳೆಸಿ ಆ ಮೂಲಕ ಒಂದು ಕುಟುಂಬದ ನೆಮ್ಮದಿ ಕೆದಕುವ ಬದುಕು ಮಾತ್ರವೆ ವಿಧವೆಯರಿಗಿರುವುದು? ಎಂಬ ಪ್ರಶ್ನೆಯನ್ನು ಗೌರಮ್ಮ

ಸೂಚ್ಯವಾಗಿ ಈ ಕಥೆಯ ಮೂಲಕ ಮುಂದಿಡುತ್ತಾರೆ. ಇಂದು ದೂರ ಹೊರಟು ಹೋಗುವ ಫಲಾಯನವಾದದಲ್ಲಿ ಕಥೆ ಕೊನೆಗೊಂಡರೂ ಇಂದುವಿನ ವಯೋಸಹಜವಾದ ಭಾವನೆಗಳು, ಸಮಾಜದ ಬಾಲ್ಯವಿವಾಹದಂತಹ ಅನಿಷ್ಟ ಪದ್ಧತಿಯಿಂದ ಆಗುಬಹುದಾದ ಅನಾಹುತಗಳನ್ನು ಕತೆ ಚರ್ಚಿಸುತ್ತದೆ".[2]

ಇವರ 'ಹೊಗಿಯೇ ಬಿಟ್ಟಿದ್ದ' ಕತೆಯು ಅಂತರ್‌ಧರ್ಮೀಯ ಪ್ರೇಮಕ್ಕೆ ಸಮಾಜದಲ್ಲಿ ಎಂದಿಗೂ ಅವಕಾಶವಿಲ್ಲ ಎಂಬುದನ್ನು ಪ್ರಸ್ತುತಪಡಿಸುತ್ತದೆ. ಪ್ರೇಮಕ್ಕೆ ಸಮಾಜದ ಕಟ್ಟಪಾಡುಗಳೆಲ್ಲವನ್ನೂ ಮೀರಿ ಗಂಡು ಹೆಣ್ಣನ್ನು ಬೆಸೆಯುವ ಶಕ್ತಿಯಿದೆ. ತಾನು ಪ್ರೀತಿಸಿದ ಮುಸ್ಲಿಂ ಹುಡುಗಿಯನ್ನು ಬೇರೆಡೆಗೆ ಕರೆದೊಯ್ದು ಬದುಕುವ ಶಕ್ತಿಯಿದ್ದರು ಓಡಿಹೋಗಿ ಬದುಕುವ ಬದುಕನ್ನು ಬಯಸದೆ ಅವಳನ್ನೆ ಕೊಂದು ತಾನು ಸಾಯಲು ಹೋಗಿ ಮುವತ್ತು ವರುಷ ಹುಚ್ಚರ ಆಸ್ಪತ್ರೆಯಲ್ಲಿ ಕಳೆಯುವಂತಾದ ದುರಂತದ ಕತೆ ಇದಾಗಿದೆ. ಹೀಗೆ ಧರ್ಮ, ಜಾತಿಗಳು ಹೇಗೆ ಪ್ರೇಮದ ಬದುಕನ್ನು ಅವನತಿಗೆ ತಳ್ಳುತ್ತವೆ ಎಂಬುದನ್ನು ಮಾರ್ಮಿಕವಾಗಿ ತಿಳಿಸಿದ್ದಾರೆ.

ಸರಸ್ವತಿಬಾಯಿ ರಾಜವಾಡೆ ಇವರು ದಕ್ಷಿಣ ಕನ್ನಡದ ಪ್ರಾತಿನಿಧಿಕ ಬರಹಗಾರ್ತಿ. ಗಿರಿಬಾಲೆ ಎಂಬುದು ಇವರ ಕಾವ್ಯನಾಮ. ಇವರ 'ಅವಳ ಉದ್ದಾರ'ಕತೆಯು ಒಂದು ಹೆಣ್ಣಿನ ಶೋಷಣೆಯ ಘೋರತೆಯನ್ನು ತಿಳಿಸುತ್ತದೆ. ವಿಧವಾ ಸ್ತ್ರೀಯರ ಸ್ಥಿತಿಗತಿಗಳನ್ನು ಸುಧಾರಿಸಲು ರೂಪುಗೊಂಡಿರುವ ವಿಧವಾಶ್ರಮಗಳೆ ಹೆಣ್ಣನ್ನು ಹೇಗೆ ಶೋಷಿಸುವ ಸ್ಥಳಗಳಾಗಿವೆ ಎಂಬುದನ್ನು ಈ ಕತೆಯಲ್ಲಿ ಚಿತ್ರಿಸಿದ್ದಾರೆ. ವಿಧವೆಯಾಗಿದ್ದ ಗೋಪಿಯನ್ನು ವೇಶ್ಯಾ ಬದುಕಿಗೆ ತಳ್ಳುವಲ್ಲಿ ಒಂದು ವಿದದಲ್ಲಿ ಈ ಆಶ್ರಮವೇ ಕಾರಣವಾಗುತ್ತದೆ. ತನ್ನ ಭಾವನಿಂದಲೆ ಅತ್ಯಾಚಾರಕ್ಕೊಳಗಾಗಿ ಗರ್ಭಿಣಿಯಾಗಿ ಮನೆಯಿಂದಲೇ ಹೊರದಬ್ಬಲ್ಪಟ್ಟು ವಿಧವಾಶ್ರಮವೊಂದನ್ನು ಹುಡುಕಿಕೊಂಡು ಆಶ್ರಯ ಪಡೆಯಲು ಬಂದ ಗೋಪಿಗೆ ಆ ಆಶ್ರಮ ಒಂದು ದಲ್ಲಾಳಿಗಳ ಸಂತೆಯೆಂಬುದು ಮುದುಕ ವಿಧುರನೊಬ್ಬನಿಗೆ ಆಶ್ರಮದ ವ್ಯವಸ್ಥಾಪಕ ಇವಳನ್ನು ಐದು ಸಾವಿರಕ್ಕೆ ಮಾರಿದಾಗ ಅರಿವಾಗುತ್ತದೆ. ಆ ಮುದುಕ ಇವಳ ತಂದೆಯ ವಯಸ್ಸಿಗ ಆ ಮುದುಕನ ಕುಡಿತ ಸ್ವೇಚ್ಛಾಚಾರಿಕೆಯ ಮಾತುಗಳಿಂದ ನೊಂದು ಪ್ರತಿರೋಧಿಸಿದಾಗ ಅಲ್ಲಿಂದಲೂ ಹೊರಹಾಕಲ್ಪಟ್ಟು ಒಬ್ಬ ದಲ್ಲಾಳಿಯ ಕೈಸೇರಿ ವೇಶ್ಯೇಯಾಗಬೇಕಾದ ಅಸಹಾಯಕ ಪರಿಸ್ಥಿಗೆ ಸಿಲುಕಬೇಕಾಗುತ್ತದೆ.

"ನಿರಾಶ್ರಿತ ನೊಂದ ಹೆಣ್ಣುಗಳಿಗೆ ಪರಿಹಾರ ಒದಗಿಸುವ ಅನುಕಂಪದ ಮುಖವಾಡ ಹೊತ್ತ ಸಂಘ-ಸಂಸ್ಥೆಗಳು ತಮ್ಮ ಸ್ವಾರ್ಥಕ್ಕಾಗಿ. ನೊಂದ ಹೆಣ್ಣನ್ನೇ ಬಂಡವಾಳವಾಗಿಸಿಕೊಳ್ಳುವ ಶೋಷಣೆಯ ಇನ್ನೊಂದು ಮುಖದ ಅನಾವರಣವನ್ನು 'ಅವಳ ಉದ್ದಾರ' ಕತೆಯಲ್ಲಿ ಗಿರಿಬಾಲೆಯವರು ಮಾರ್ಮಿಕವಾಗಿ ಬಿಂಬಿಸಿದ್ದಾರೆ".[3]

ಬಾಲವಿಧವೆಯಾದ ಆರ್. ಕಲ್ಯಾಣಮ್ಮ ಅವರು ಮಗುವನ್ನು ಕಳೆದುಕೊಂಡ ಹೆಣ್ಣಿನ ನೋವನ್ನು 'ನನ್ನ ಧನವನ್ನು ನನಗೆ ತಾ' ಕತೆಯಲ್ಲೂ, ಮಕ್ಕಳನ್ನು ಬೆಳೆಸುವಲ್ಲಿ ತಾಯಿಯ ಪಾತ್ರ ಎಷ್ಟು ಮುಖ್ಯ ಎಂಬುದನ್ನು 'ಒಲ್ಲದ ಹೆಂಡತಿ' ಕತೆಯಲ್ಲೂ ತಿಳಿಸಿದ್ದಾರೆ. 'ನನ್ನ ಧನವನ್ನು ನನಗೆ ತಾ' ಕತೆಯಲ್ಲಿ ಪ್ರಭಾವತಿಯ ಪತಿ ಮರಣಹೊಂದಿ ಒಂದು ವರ್ಷವಾಗಿತ್ತು ಆಗ ಮೂರು ವರ್ಷದ ಏನೂ ಅರಿಯದ ಕಂದನಾಗಿದ್ದರಿಂದ ತಾಯಿ ತನ್ನ ಮಗನಿಗೆ ಅಪ್ಪನಿಲ್ಲವೆಂದು ಹೇಳಿರಲಿಲ್ಲ ಅಂದಿನಿಂದ ನಾಳೆಬರುವನು ಎಂದು ನೆಪ ಹೇಳಿಕೊಂಡೆ ನೋವನ್ನು ನುಂಗುತ್ತಿದ್ದಳು. ಪತಿವಿಹಿನೆಯಾದ ಆಕೆಗೆ ಮಗುವೊಂದೆ ಜೀವನದ ಸರ್ವಸ್ವವಾಗಿತ್ತು. ಕೆಲವೊಮ್ಮೆ ಅಪ್ಪನನ್ನು ನೋಡಲೇಬೇಕೆಂಬ ಹಠ ವಿಪರೀತವಾಗಿ ತಂದೆ ನನ್ನನ್ನು ನೋಡಲು ಏಕೆ ಬರುತ್ತಿಲ್ಲ, ನಾನೆಂದರೆ ಇಷ್ಟವಿಲ್ಲವೆಂದು ಮಗು ಕೇಳಿದಾಗ ತಾಯಿಯ ಹೃದಯ ಕಿತ್ತು ಬಂದಂತೆ ರೋಧಿಸುತ್ತಿತ್ತು. ಸುಮಾರು 20 ದಿನಗಳ ಜ್ವರದಿಂದ ನರಳಿ ಇಲ್ಲವಾದ ಮಗುವಿನ ನಿರ್ಜೀವ ದೇಹವನ್ನೆದೆಗಪ್ಪಿಕೊಂಡು ಚುಂಬಿಸಿ ಘೋರ ಕತ್ತಲಿನಲ್ಲಿಯೇ ದೇವಾ। ನನ್ನ ಧನವನ್ನು ನನಗೆ ತಾ ಎಂದು ಚೀತ್ಕಾರ ಮಾಡುವ ತಾಯಿಯ ನೋವನ್ನು , ಅಳಲನ್ನು ಮನಮಿಡಿಯುವಂತೆ ತುಂಬಿದ್ದಾರೆ.

ಇವರ 'ಒಲ್ಲದ ಹೆಂಡತಿ' ಕತೆಯು ಬಹುಪತ್ನಿತ್ವದ ದುಷ್ಪರಿಣಾಮಗಳು ಹಾಗೂ ಅನಾರೋಗ್ಯದ ಕಾರಣದಿಂದಾಗಿ ಇಲ್ಲದ ತಪ್ಪುಗಳಿಗೆ ಕುಟುಂಬದವರಿಂದಲೇ ಶೋಷಣೆಗೆ ಒಳಗಾಗಿ ಬದುಕಬೇಕಾದ ಹೆಣ್ಣಿನ ಸ್ಥಿತಿಯನ್ನು ತಿಳಿಸುತ್ತದೆ. ಮಕ್ಕಳ ಬೆಳವಣಿಗೆಯ ಅವಧಿಯಲ್ಲಿ ಕುಟುಂಬದ ವಾತಾವರಣಬೇಕು ಹೇಗಿರಬೇಕು ಎಂಬಂತಹ ಅಂಶಗಳ ಬಗೆಗೂ ಈ ಕತೆಯಲ್ಲಿ ಗಮನಹರಿಸಿದ್ದಾರೆ.

ಉತ್ತರ ಕರ್ನಾಟಕರ ಲೇಖಕಿಯಾದ ಶ್ಯಾಮಲಾದೇವಿ ಬೆಳಗಾವಂಕರ್ ಪರ್ತಕರ್ತೆಯಾದ ಇವರು ಮಧ್ಯಮ ವರ್ಗದ ಬದುಕನ್ನ ಕಟ್ಟಿಕೊಟ್ಟಿದ್ದಾರೆ. ಇವರ 'ಕಂತಿಯ ದೇಶಾಂತರ' ಕತೆಯಲ್ಲಿ ಕಂತೆ ಕುಡುಕ ಗಂಡನಿಂದ ಬೇಸತ್ತು ದೇಶಾಂತರ ಹೋಗಿ ಗೌರಿಯಾಗಿ ಬದುಕನ್ನು ಕಟ್ಟಿಕೊಂಡ ಕತೆಯಿದೆ. ಕಂತೆ ಅಂದರೆ ಕೊಂತೆವ್ವ, ಕುಂತವ್ವ, ಕುಂತೀದೇವೆ ಬಡವಿಯಾದರೂ ಛಲಗಾತಿ ಎರಡು ಮಕ್ಕಳನ್ನು ಕಟ್ಕೊಕೊಂಡು ಮಕ್ಕಳಿಗಾಗಿಯೇ ಸದಾ ಕುಡುಕ ಗಂಡನೊಂದಿಗೆ ಹೆಣಗಾಡುವಳು. ತಲೆಯ ಮೇಲೆ ಬುತ್ತಿಯ ಗಂಟಿನೊಂದಿಗೆ ಗೋಡಂಬಿ, ಹೂಮಾಲೆ ಹಣಿಗೆಗಳನ್ನು ಬೆನ್ನಿಗೊಂದು ಮಗುವನ್ನು ಕಟ್ಟಿಕೊಂಡು ಮಾರುತ್ತಾ ಕಷ್ಟದಲ್ಲಿಯೆ ಬದುಕುತ್ತಿದ್ದಳು. ಗಂಡ ಕುಡುಕ ಯಾವ ಕೆಲಸವನ್ನು ಮಾಡದೆ ಕುಡಿತಕ್ಕೆ ಹಣ ಸುಲಿಗೆ ಮಾಡಲು ಅವಳನ್ನು ದಿನಾ ಹಿಡಿದು ಬಡಿಯುತ್ತಿದ್ದ. ಇಂತಹ ಬದುಕಿನಿಂದ ಬೇಸತ್ತ ಕುಂತಿ ಇವನೊಂದಿಗೆ ಬದುಕಲು ಸಾಧ್ಯವಿಲ್ಲ ಎಂದು ನಿರ್ಧರಿಸಿ ಎರಡು ಮಕ್ಕಳೊಡನೆ ಗಂಡನನ್ನು ಬಿಟ್ಟು ಬೇರೆ ಊರಿಗೆ ಬಂದು ನೆಲೆಸಿ ಬದುಕಲು ಮುಂದಾದದಾಗ,

ಕೆಲಸದಲ್ಲಿನ ಅವಳ ಶ್ರದ್ದೆ ಪ್ರಾಮಾಣಿಕತೆ, ಮುಗ್ಧ ಮನಸ್ಸೆ ಅವಳಿಗೊಂದು ಸುಂದರ ಬದುಕನ್ನು ತಂದುಕೊಟ್ಟವು. ಮಾದನಂತಹ ಒಳ್ಳೆಯ ಸಂಗಾತಿ ಸಿಕ್ಕರು ಆಕೆಯ ಮನಸ್ಸಿನಲ್ಲಿ ತನಗೆ ಬಡಿಯುತ್ತಿದ್ದ ಗಂಡನನ್ನೆ ಸ್ಮರಿಸುತ್ತಾ ಅವನಿಗೆ ಮನಸ್ಸಿನಲ್ಲಿಯೇ ಪತಿಭಕ್ತಿಯ ಶ್ರದ್ಧೆಯನ್ನು ತೋರುವಳು. "ಇಲ್ಲಿ ಕೆಳವರ್ಗದ ಕಂತಿಗೆ ಗೌಡರ ಅನುಮತಿಯೊಂದಿಗೆ(ವ್ಯವಸ್ಥೆಯ) ಸಹಬಾಳ್ವೆಯನ್ನು ತನ್ನದಾಗಿಸುವ ಅಧಿಕಾರ, ಹಕ್ಕು ಎಲ್ಲವನ್ನೂ ಲೇಖಕಿ ನೀಡಿರುವುದು ಗಮನಿಸಬೇಕಾದ ಅಂಶ".[4]

ನವೋದಯ ಸಂದರ್ಭದಲ್ಲಿ ಹೆಣ್ಣು ಬರೆಯಲು ಸೂಕ್ತ ಸನ್ನಿವೇಶಗಳಿಲ್ಲದಿದ್ದರೂ ತಮ್ಮದೇ ಆದ ರೀತಿಯಲ್ಲಿ, ತಮ್ಮದೆ ವಸ್ತು ವಿಷಯಗಳೊಂದಿಗೆ ಸಾಹಿತ್ಯಿಕವಾಗಿ ಮಹಿಳಾಚಾಪನ್ನು ಮೂಡಿಸಿದ್ದು ಆರಂಭದ ಬರಹಗಾರ್ತಿಯರಾದ ಕೊಡಗಿನ ಗೌರಮ್ಮ, ಕಲ್ಯಾಣಮ್ಮ, ಸರಸ್ವತಿ ರಾಜವಾಡೆ, ಶ್ಯಾಮಲಾದೇವಿ ಇನ್ನೂ ಮೊದಲಾದವರಿಗೆ ಸಲ್ಲುತ್ತದೆ. ಇವರು ಸ್ತ್ರೀಯರ ಬವಣೆ ಬಗೆಗೆ ಮೊನಚಾಗಿ ವ್ಯಂಗ್ಯದಿಂದ ಸಮಾಜವನ್ನು ಎಚ್ಚರಿಸುವ ಪ್ರಯತ್ನಗಳು ಇತವ ಕಥೆಗಳಲ್ಲಿವೆ. ಕೌಟುಂಬಿಕ ಹಾಗೂ ಸಾಮಾಜಿಕವಾದ ಸಮಸ್ಯೆಗಳು ಇವರನ್ನ ಚಿಂತೆಗೆ ದೂಡಿ ಸ್ತ್ರೀಪರವಾ ನಿಲುವುಗಳು ಇವರ ಅಭಿವ್ಯಕ್ತಿಯಲ್ಲಿವೆ. ವಿಧವಾ ಸಮಸ್ಯೆ, ಬಾಲ್ಯವಿವಾಹ, ಬಡತನ ದುಡಿತ ಅಂತರ್ಜಾತಿ ಪ್ರೇಮ ಮೊದಲಾದವುಗಳ ಬಗೆಗೆ ಇವರು ಧನಿ ಎತ್ತಿದ್ದು ವಿಶಿಷ್ಟವಾಗಿದೆ.

**ಅಡಿ ಟಿಪ್ಪಣಿಗಳು:**

1. ಗಾಯತ್ರಿ ನಾವಡ (ಸಂ). 2018(). ಹೊಸಗನ್ನಡ ಕಥಾ ವಲ್ಲರಿ. ಕನ್ನಡ ಸಾಹಿತ್ಯ ಪರಿಷತ್ತು. ಬೆಂಗಳೂರು. ಪು.ಸಂ. 22.
2. ವಿಜಯಶ್ರೀ ಸಬರದ (ಸಂ). (2013). ಸಣ್ಣಕಥೆ: ಆಧುನಿಕ ಕನ್ನಡ ಮಹಿಳಾ ಸಾಹಿತ್ಯ ಚರಿತ್ರೆ. ಪ್ರಸಾರಾಂಗ, ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯ. ವಿಜಾಪುರ. ಪು.ಸಂ. 361
3. ವಿಜಯಶ್ರೀ ಸಬರದ (ಸಂ). (2013). ಸಣ್ಣಕಥೆ: ಆಧುನಿಕ ಕನ್ನಡ ಮಹಿಳಾ ಸಾಹಿತ್ಯ ಚರಿತ್ರೆ. ಪ್ರಸಾರಾಂಗ, ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯ. ವಿಜಾಪುರ. ಪು.ಸಂ. 374
4. ವಿಜಯಶ್ರೀ ಸಬರದ (ಸಂ). (2013). ಸಣ್ಣಕಥೆ: ಆಧುನಿಕ ಕನ್ನಡ ಮಹಿಳಾ ಸಾಹಿತ್ಯ ಚರಿತ್ರೆ. ಪ್ರಸಾರಾಂಗ, ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯ. ವಿಜಾಪುರ. ಪು.ಸಂ. 354

**ಪರಾಮರ್ಶನ ಗ್ರಂಥಗಳು:**

1. ಗಾಯತ್ರಿ ನಾವಡ (ಸಂ). (2018). ಹೊಸಗನ್ನಡ ಕಥಾ ವಲ್ಲರಿ. ಕನ್ನಡ ಸಾಹಿತ್ಯ ಪರಿಷತ್ತು. ಬೆಂಗಳೂರು.
2. ವಿಜಯಶ್ರೀ ಸಬರದ (ಸಂ). (2013). ಸಣ್ಣಕಥೆ: ಆಧುನಿಕ ಕನ್ನಡ ಮಹಿಳಾ ಸಾಹಿತ್ಯ ಚರಿತ್ರೆ. ಪ್ರಸಾರಾಂಗ, ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯ. ವಿಜಾಪುರ.
3. ಕರೀಗೌಡ ಬೀಚನಹಳ್ಳಿ. (2003). ಶತಮಾನದ ಸಣ್ಣಕಥೆಗಳ ಸಮೀಕ್ಷೆ. ಕರ್ನಾಟಕ ಸಾಹಿತ್ಯ ಅಕಾಡೆಮಿ. ಬೆಂಗಳೂರು.
4. ದಿವಾಕರ್ ಎಸ್. (ಸಂ). (2019). ಶತಮಾನದ ಸಣ್ಣ ಕತೆಗಳು. ಪ್ರೀಸಮ್ ಬುಕ್ಸ್ ಪ್ರೈ.ಲಿ. ಬೆಂಗಳೂರು.

**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.

**About the License:**

© The Authors 2024. The text of this article is open access and licensed under a Creative Commons Attribution 4.0 International License.